# ಸಾಧನೆಯ ಶಿಖರದಲ್ಲಿ

ಅಂತರರಾಷ್ಟ್ರೀಯ ಕ್ರಿಕೆಟ್‌ನ ಈಗಿನ ಸ್ಪರ್ಧಾತ್ಮಕ ಯುಗದಲ್ಲಿ ಯಾವುದೇ ಬೌಲರ್ ಅಥವಾ ಬ್ಯಾಟ್ಸ್‌ಮನ್ ಆಗಲಿ, 'ವಿಶ್ವದ ನಂಬರ್ ಒನ್' ರ‍್ಯಾಂಕಿಂಗ್ ಗಳಿಸುವುದು ಅಷ್ಟು ಸುಲಭವಲ್ಲ. ಕಳೆದ ವಾರ ಐಸಿಸಿ ಪ್ರಕಟಿಸಿದ ಪಟ್ಟಿಯಲ್ಲಿ ನಮ್ಮ ಆಫ್‌ಸ್ಪಿನ್ನರ್ ಆರ್.ಅಶ್ವಿನ್ ಈ ಸರ್ವಶ್ರೇಷ್ಠ ಸಾಧನೆ ದಾಖಲಿಸಿದ್ದಾನೆ. ಅಶ್ವಿನ್ ಈಗ 'ವಿಶ್ವದ ನಂಬರ್ ಒನ್ ಬೌಲರ್! ಇನ್ನೂ 29ರ ಹರೆಯದ ಅಶ್ವಿನ್, (ಬರ್ತ್‌ಡೇ 17-9-1986) ಕೇವಲ 4 ವರ್ಷಗಳ ಆಟದಲ್ಲೇ ಈ ಮಹತ್ಸಾಧನೆ ಮಾಡಿರುವುದು ಎಲ್ಲರ ಬೆರಳನ್ನೂ ಮೂಗಿಗೇರಿಸಿದೆ. ಈ ಹಿಂದೆ 1973ರಲ್ಲಿ ಭಾರತದ ಟೆಸ್ಟ್ ಕ್ಯಾಪ್ಟನ್ ಲೆಗ್‌ಸ್ಪಿನ್ನರ್ ಬಿಶನ್‌ಸಿಂಗ್ ಬೇಡಿ ಈ ರೀತಿಯ ಸಾಧನೆಯನ್ನು ಮಾಡಿದ್ದು ಬಿಟ್ಟರೆ, ಅಶ್ವಿನ್ ಮಾಡಿದ್ದೇ ಮೊದಲ ದಾಖಲೆ. ಭಾರತದ ಕ್ರಿಕೆಟ್‌ನಲ್ಲಿ ಹಿಂದೆ ವಿಶ್ವಖ್ಯಾತಿಯ ಬೌಲರ್‌ಗಳು ಬಂದುಹೋಗಿದ್ದಾರೆ. ಬಿ.ಎಸ್.ಚಂದ್ರಶೇಖರ್, ಕಪಿಲ್‌ದೇವ್, ಅನಿಲ್ ಕುಂಬ್ಳೆ ಮುಂತಾದ ಅತ್ಯುತ್ತಮ ಬೌಲರ್‌ಗಳಿಗೂ ಈ ಸಾಧನೆ ಮಾಡಲು ಸಾಧ್ಯವಾಗಿರಲಿಲ್ಲ. ಈ ಮೂವರೂ 'ವಿಶ್ವದ ನಂಬರ್ ಟೂ ಬೌಲರ್' ಗಳಾಗಿ ರ‍್ಯಾಂಕಿಂಗ್ ಪಡೆದದ್ದುಂಟು. ಈ ಹಿನ್ನೆಲೆಯಲ್ಲಿ ನೋಡಿದರೆ ಅಶ್ವಿನ್ ಸಾಧನೆ ಅದ್ಭುತವೇ. ಆದರೆ ಇಲ್ಲೂ ಅದೃಷ್ಟವೊಂದು ಅಶ್ವಿನ್ ಕೈಹಿಡಿಯಿತು ಎನ್ನುವುದು ಸುಳ್ಳಲ್ಲ. ದಕ್ಷಿಣ ಆಫ್ರಿಕಾ ವಿರುದ್ಧದ ಟೆಸ್ಟ್ ಸರಣಿಯಲ್ಲಿ 'ವಿಶ್ವದ ನಂಬರ್ ಒನ್ ಬೌಲರ್' ಪಟ್ಟಕ್ಕೆ ಅಶ್ವಿನ್‌ಗೆ ತೀವ್ರ ಸ್ಪರ್ಧೆ ಒಡ್ಡಿದಾತ ವೇಗಿ ಡೇಲ್ ಸ್ಟೇನ್. ಆಫ್ರಿಕಾ ಜತೆಗಿನ ಸರಣಿ ಆರಂಭವಾಗುವಾಗ ಡೇಲ್ ಸ್ಟೇನ್, ಅಶ್ವಿನ್‌ಗಿಂತ ನಾಲ್ಕು ಅಂಕ ಮುಂದಿದ್ದ. ಆದರೆ ಆತನ ದುರದೃಷ್ಟ ಎಂಬಂತೆ ಡರ್ಬಾನ್ ಟೆಸ್ಟ್‌ನಲ್ಲಿ ಎರಡನೇ ಇನಿಂಗ್ಸ್‌ನಲ್ಲಿ 3.5 ಓವರ್ ಮಾತ್ರ ಬೌಲ್ ಮಾಡಿ ಗಾಯಗೊಂಡು ನಿವೃತ್ತನಾದ. ಹೀಗಾಗಿ ಅಂತಿಮ ಸ್ಪರ್ಧೆಯಲ್ಲಿ ಆತ 4 ಅಂಕಗಳಿಂದ ಹಿಂದೆ ಬಿದ್ದ. 2009ರಿಂದ ಈತ ಐದು ಸಲ 'ವಿಶ್ವದ ನಂಬರ್ ಒನ್ ಬೌಲರ್' ಆಗಿ ಆಯ್ಕೆಯಾಗಿದ್ದ ಎನ್ನುವುದು ಗಮನಾರ್ಹ.

ಏನೇ ಇದ್ದರೂ 2015ರಲ್ಲಿ ಅಶ್ವಿನ್ ಸಾಧನೆ ಸ್ಮರಣಾರ್ಹವೇ. 2015ರ ಆರಂಭದಲ್ಲಿ ಅಶ್ವಿನ್ ವಿಶ್ವ ರ‍್ಯಾಂಕಿಂಗ್‌ನಲ್ಲಿ 15ನೇ ಸ್ಥಾನದಲ್ಲಿದ್ದ. ಈ ವರ್ಷ ಆಡಿದ 9 ಟೆಸ್ಟ್‌ಗಳಲ್ಲಿ ಒಟ್ಟು 62 ವಿಕೆಟ್‌ಗಳನ್ನು ಕಬಳಿಸಿದ್ದು ಅಶ್ವಿನ್ ಪ್ರತಿಭೆಗೆ ಸಾಕ್ಷಿ. ಬೌಲಿಂಗ್ ಜತೆಗೆ ಬ್ಯಾಟಿಂಗ್‌ನಲ್ಲೂ ಮಿಂಚಿರುವ ಅಶ್ವಿನ್, ಈ ವರ್ಷ ಬಿಸಿಸಿಐ ನಿಂದ 'ವರ್ಷದ ಅತ್ಯುತ್ತಮ ಟೆಸ್ಟ್ ಆಲ್‌ರೌಂಡರ್' ಎಂಬ ಪ್ರಶಸ್ತಿಯನ್ನೂ ಗೆದ್ದುಕೊಂಡಿದ್ದಾನೆ. 2011ರ ನವೆಂಬರ್‌ನಲ್ಲಿ ಟೆಸ್ಟ್ ಕ್ರಿಕೆಟ್‌ಗೆ ಪಾದಾರ್ಪಣೆ ಮಾಡಿದ ಈ ಬಲಗೈ ಆಟಗಾರ, ಈವರೆಗೆ ನಾಲ್ಕು ಸಲ ಒಂದೇ ಇನಿಂಗ್ಸ್‌ನಲ್ಲಿ 10 ವಿಕೆಟ್ ಕಬಳಿಸಿರುವ ಸಾಧನೆ ಮಾಡಿದ್ದಾನೆ. 16 ಸಲ ಒಂದೇ ಇನಿಂಗ್ಸ್‌ನಲ್ಲಿ ಐದು ವಿಕೆಟ್ ಕಬಳಿಸಿ ಭಾರತದ ಹಲವು ವಿಜಯಗಳಲ್ಲಿ ಮುಖ್ಯ ಪಾತ್ರ ವಹಿಸಿದ್ದಾನೆ. 18ನೇ ಟೆಸ್ಟ್‌ನಲ್ಲೇ 100 ವಿಕೆಟ್‌ಗಳ ಸಾಧನೆ ನಡೆಸಿರುವ ಭಾರತದ ಮೊದಲ ಬೌಲರ್ ಈತ. ಈ ಹಿಂದೆ ಎರಪಳ್ಳಿ ಪ್ರಸನ್ನ ಅವರು 20 ಟೆಸ್ಟ್‌ಗಳಲ್ಲಿ 100 ವಿಕೆಟ್ ಸಾಧನೆ ನಡೆಸಿದ್ದರು. ಈ ರೀತಿ ಅತ್ಯಧಿಕ ವೇಗವಾಗಿ 100 ವಿಕೆಟ್ ಕಬಳಿಸಿದ ವಿಶ್ವದ ಐದನೇ ಬೌಲರ್ ಈತ.

ಅಶ್ವಿನ್ ಅತ್ಯುತ್ತಮ ಬ್ಯಾಟ್ಸ್‌ಮನ್ ಕೂಡಾ ಹೌದು. 2011ರಲ್ಲಿ ವಾಂಖೆಡೆ ಸ್ಟೇಡಿಯಂನಲ್ಲಿ ವೆಸ್ಟ್‌ಇಂಡೀಸ್ ವಿರುದ್ಧ 100 ರನ್‌ಗಳನ್ನು ಹೊಡೆದ ಈತನ ಆಟ ಈಗಲೂ ಕಣ್ಣಿಗೆ ಕಟ್ಟಿದಂತಿದೆ. ಆ ಟೆಸ್ಟ್‌ನಲ್ಲಿ 9 ವಿಕೆಟ್‌ಗಳನ್ನೂ ಕಬಳಿಸಿದ್ದ. ಟೆಸ್ಟ್ ಒಂದರಲ್ಲಿ 100 ರನ್ ಮತ್ತು ಐದಕ್ಕಿಂತ ಹೆಚ್ಚು ವಿಕೆಟ್‌ಗಳನ್ನು ಪಡೆದವರು ಭಾರತದಲ್ಲಿ ಇತರ ನಾಲ್ವರು ಮಾತ್ರ. ಆದರೆ ಈ ಸಾಧನೆಯನ್ನು ಎರಡು ಸಲ ಮಾಡಿದಾತ ಅಶ್ವಿನ್ ಒಬ್ಬನೇ. ಹೀಗೆಂದೇ 2013ರ ವಿಶ್ವ ಕ್ರಿಕೆಟ್ ತಂಡದಲ್ಲೂ ಈತನಿಗೆ ಸ್ಥಾನ ಸಿಕ್ಕಿತ್ತು.



ತಮಿಳುನಾಡಿನ ಪಶ್ಚಿಮ ಮಾಂಬಳಂನ ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದ ಅಶ್ವಿನ್ ಬಾಲ್ಯದಲ್ಲೇ ಓದು ಮತ್ತು ಕ್ರಿಕೆಟ್ ಎರಡರಲ್ಲೂ ಮುಂದು. ಎಗ್ಮೋರ್ ಕ್ರಿಕೆಟ್ ಕ್ಲಬ್ ಪರವಾಗಿ ಓಪನಿಂಗ್ ಬ್ಯಾಟ್ಸ್‌ಮನ್ ಆಗಿ 13 ವರ್ಷ ಆಡಿದ್ದ. 14ರ ವಯಸ್ಸಿನಲ್ಲಿ ಒಮ್ಮೆ ಬಿದ್ದು ಪೃಷ್ಠದ ಮೂಳೆಗೆ ಗಂಭೀರ ಏಟು ಮಾಡಿಕೊಂಡ. ವೈದ್ಯರು ಆಪರೇಷನ್ ಅನಿವಾರ್ಯ ಎಂದರು. ಆದರೆ ಇನ್ನೊಬ್ಬ ವೈದ್ಯರು ಒಪ್ಪಲಿಲ್ಲ. 2 ತಿಂಗಳು ಬೆಡ್‌ರೆಸ್ಟ್, ಬಳಿಕ 8 ತಿಂಗಳು ವಿಶ್ರಾಂತಿ. ಆ ಬಳಿಕ ಕೋಚ್ ಸಲಹೆ ಮೇರೆಗೆ ಸ್ಪಿನ್ ಬೌಲಿಂಗ್ ಆಯ್ಕೆ ಮಾಡಿಕೊಂಡ. ಅದೇ ಈಗ ವರವಾಗಿದೆ. ಇಂಗ್ಲೆಂಡ್ ಸರಣಿಯ 4 ಟೆಸ್ಟ್‌ಗಳಲ್ಲಿ ಕೇವಲ 14 ವಿಕೆಟ್ ಗಳಿಸಿದ್ದಾಗ (ಅದೂ 52.64 ರನ್ ದುಬಾರಿ ಸರಾಸರಿ) ಈತನ ಆಟ ಮುಗಿಯಿತು ಎಂದವರಿದ್ದರು. ಆದರೆ ಬಾಲ್ಯದ ಕೋಚ್ ಸುನಿಲ್ ಸುಬ್ರಮಣಿಯನ್ ಸುಪರ್ದಿಯಲ್ಲಿ ಮತ್ತೆ ಮೇಲೆದ್ದು ಬಂದ ಅಶ್ವಿನ್, ನಂತರ ಆಸ್ಟ್ರೇಲಿಯಾ ವಿರುದ್ಧ ಸರಣಿಯಲ್ಲಿ ಕೇವಲ 20.10 ಸರಾಸರಿ ರನ್‌ಗೆ ಒಟ್ಟು 23 ವಿಕೆಟ್ ಕಬಳಿಸಿ ಫೀನಿಕ್ಸ್‌ನಂತೆ ಮರಳಿದ. ಈಗ ಅರ್ಹವಾಗಿಯೇ 'ವಿಶ್ವದ ನಂಬರ್ ಒನ್ ಬೌಲರ್'ಪಟ್ಟ ಲಭಿಸಿದೆ. ■

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65